ಇದ್ದರೆ ನಾವು ಜನರಿಗೆ ಮೋಸ ಮಾಡಿದಂತೆ ಆಗುತ್ತದೆ. ತಾವು ಇದರ ಬಗ್ಗೆ ಮತ್ತೊಮ್ಮೆ ಮರುಪರಿಶೀಲನೆ ಮಾಡಿ ತಕ್ಷಣ ಒಂದು ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು:- ಶ್ರೀಮತಿ ಸುಮಾವಂಸತ್,

ಶ್ರೀ ಡಿ.ಎ. ಚಿನ್ನಪ್ಪ:- ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು:- ನಾವು ಹೇಳುವುದು ಏನೆಂದರೆ, ಮಾನ್ಯ ಕಂದಾಯ ಸಚಿವರೊಂದಿಗೆ ಮಾತನಾಡಿ ಇದನ್ನು ಫೈನಲ್ ಮಾಡಿ.

ನಿಯಮ 334ರ ಮೇರೆಗೆ

(1) ಬೆಳಗಾಂ ಜಿಲ್ಲೆ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ತೊಂದರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ಬೈಲಹೊಂಗಲ ಮತ್ತು ಸೌದತ್ತಿ ತಾಲ್ಲೂಕುಗಳಲ್ಲಿ ಟ್ರಾನ್ಸ್‌ಫರ್ಮರ್‌ಗಳು ಸುಟ್ಟಿದ್ದು, ಇದರಿಂದಾಗಿ ರೈತರಿಗೆ ತೊಂದರೆಯಾಗಲಿಕ್ಕೆ ಹತ್ತಿರುತ್ತದೆ. ಅಲ್ಲದೆ ಕುಡಿಯುವ ನೀರಿನ ಸರಬರಾಜು ಮಾಡಲೂ ಸಹಾ ಪಿ.ಹೆಚ್.ಇ.ಯವರಿಗೆ ತ್ರಾಸ್ ಆಗಲಿಕ್ಕೆ ಹತ್ತಿರುತ್ತದೆ. ಟ್ರಾನ್ಸ್‌ಫರ್ಮರ್‌ಗಳನ್ನು ಪೂರೈಸಲು ಕೇಳಿದರೆ ಬೆಂಗಳೂರಿನಿಂದ 63 ವೋಲ್ಟೇಜ್ ಮತ್ತು 100 ವೋಲ್ಟೇಜ್‌ನ ಟ್ರಾನ್ಸ್‌ಫರ್ಮರ್‌ಗಳು ಬರುತ್ತಿಲ್ಲ ಎಂದು ಉತ್ತರ ಕೊಡಲಿಕ್ಕೆ ಹತ್ತಿರುತ್ತಾರೆ.

ಇದು ಅಲ್ಲದೆ, ಈ ತಾಲ್ಲೂಕುಗಳಲ್ಲಿ ಐ.ಪಿ.ಸೆಟ್ ಕನೆಕ್ಷನ್ ಕೊಡುವಲ್ಲಿಯೂ ಸಹಾ ತುಂಬಾ ನಿಧಾನವಾಗಲಿಕ್ಕೆ ಹತ್ತಿರುತ್ತಾರೆ. ಕನೆಕ್ಷನ್ ಕೊಡಲು ಕೇಳಿದಾಗ ಉಪಕರಣಗಳನ್ನು ಪೂರೈಸುವಲ್ಲಿ ಬಹಳ ವಿಳಂಬವಾಗುತ್ತದೆಂದು ಉತ್ತರ ಹೇಳುತ್ತಾರೆ.

ಆದಕಾರಣ, ಕೂಡಲೇ ಟ್ರಾನ್ಸ್‌ಫರ್ಮರ್‌ಗಳನ್ನು ಹಾಗೂ ಐ.ಪಿ.ಸೆಟ್ ಉಪಕರಣಗಳನ್ನು ಪೂರೈಸಲು ಆದೇಶ ನೀಡಬೇಕು. ಮತ್ತು ಬೈಲುಹೊಂಗಲ ನಗರದಲ್ಲಿ ವಿದ್ಯುತ್ ಸರಬರಾಜು ಉತ್ತಮ ರೀತಿಯಿಂದ ಮಾಡಲು ಕ್ರಮ ಕೈಗೊಳ್ಳಲು ಆದೇಶ ನೀಡುವುದಾಗಬೇಕು. ಇದು ಅಲ್ಲದೆ, ಸಾದತ್ತಿ ತಾಲ್ಲೂಕು ಯೆಕಿ ರುದ್ರಾಪುರ ತಾಂಡಿಗೆ ಇದುವರೆಗೂ ಎಲೆಕ್ಟ್ರಿಸಿಟಿ ಕೊಟ್ಟಿರುವುದಿಲ್ಲ ಕೂಡಲೇ ಈ ಗ್ರಾಮಕ್ಕೆ ಎಲೆಕ್ಟ್ರಿಸಿಟಿ ಕೊಡಲು ಕ್ರಮ ಕೈಗೊಳ್ಳಬೇಕು ತಮ್ಮ ಮುಖಾಂತರ ಮಾನ್ಯ ವಿದ್ಯುತ್ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇನೆ.

(2) ಬನ್ನೂರು ಕುರಿ ತಳಿಯ ಅಭಿವೃದ್ಧಿ

ಶ್ರೀ ಎಸ್. ತಮ್ಮಣ್ಣ (ಕೆರಗೋಡು):-ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬನ್ನೂರು ಕುರಿ ತಳಿಯು ಬಹಳ ಉತ್ತಮ ತಳಿಯಾಗಿದ್ದು, ಈ ತಳಿಯು ರೈತನಿಗೆ ವರಪ್ರಧಾನವಾಗಿದ್ದು, ಕುರಿ ಸಾಕಾಣಿಕೆಯಲ್ಲಿ ರೈತನಿಗೆ ಲಾಭದಾಯಕವಾಗಿದ್ದು ಆರ್ಥಿಕವಾಗಿ ಅನುಕೂಲಕರವಾಗಿತ್ತು. ಇತ್ತೀಚಿನ ದಿನಗಳಲ್ಲಿ ಬನ್ನೂರು ಕುರಿತಳಿ ನಶಿಸಿ ಹೋಗುತ್ತಾ ಇದೆ. ಈ ತಳಿಯನ್ನು ಪುನರ್ ಅಭಿವೃದ್ಧಿ ಪಡಿಸುವುದು ಅವಶ್ಯವಾಗಿದೆ. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಂಡು ಬನ್ನೂರು ತಳಿಯನ್ನು ನಶಿಸಿ ಹೋಗದಂತೆ ತಡೆಯಲು ಪರಿಹಾರ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.